**<u>ದಿನಾಂಕಃ 13-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಪಿ.ಎಂ.ಕೆ ವಕೀಲರಿಂದಃ</u>**

1. ನನ್ನ ತವರುಮನೆ ಚಡವಣ. ನನ್ನ ಮದುವೆಯನ್ನು ನಿಡಗುಂದಿ ಗ್ರಾಮದಲ್ಲಿ ಶಂಕ್ರಪ್ಪ ಮಲ್ಲಪ್ಪ ಮಾಶೆಟ್ಟಿ ರವರ ಜೊತೆ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯ ಸಮಯದಲ್ಲಿ ನನಗೆ 18 ವಯಸ್ಸು ಇತ್ತು. ವಾದಿಯು ನನ್ನ ಓಣಿಯವರು ಆಗಿರುತ್ತಾರೆ. ವಾದಿಯ ಮನೆತನದ ಬಗ್ಗೆ ಗೊತ್ತಿರುತ್ತದೆ. ಪ್ರತಿವಾದಿಯ ಮನೆತನದ ಬಗ್ಗೆ ಗೊತ್ತಿರುವುದಿಲ್ಲ. ವಾದಿಯು 1ನೇ ಪ್ರತಿವಾದಿಯ ವಿರುದ್ಧ ದಾವೆ ಸಲ್ಲಿಸಿರುತ್ತಾರೆ. ಮತ್ತೆ ಯಾರ ವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ದಾವೆಯನ್ನು ತಾವು ಮಾಲಿಕರು ಎಂದು ವಾದಿಯು ದಾವೆ ಸಲ್ಲಿಸಿರುತ್ತಾರೆ. ದಾವಾ ಆಸ್ತಿಯ ದಾಖಲಾತಿಯನ್ನು ನಾನು ನೋಡಿರುತ್ತೇನೆ. ಸನ್ 1997 ರಿಂದ ದಾಖಲಾತಿಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ನಂಬರ 447/1 ಆಗಿರುತ್ತದೆ. ಅದರ ಕ್ಷೇತ್ರ 30X40 ಆಗಿರುತ್ತದೆ. ಪೂ-ಪ 30 ಫೂಟ, ಉ-ದ 40 ಫೂಟ ಇರುತ್ತದೆ. ಸದರಿ ಆಸ್ತಿಯನ್ನು ನಾನು ನೊಡಿರುತ್ತೇನೆ. ಸದರಿ ಆಸ್ತಿಯ ಚಕಬಂದಿ ಪೂರ್ವ, ದಕ್ಷಿಣ ಮತ್ತು ಉತ್ತರಕ್ಕೆ ಬೈಲು ಜಾಗೆ, ಪಶ್ಚಿಮಕ್ಕೆ ನಿವೇಶನ ನಂ.2, ಇರುತ್ತದೆ.

3. ನಾನು ದಾವಾದ ಆಸ್ತಿಯನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರ ಪರಿಚಯ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ನಂಬರ 447/1 ರಲ್ಲಿ ಈಗ ಎರಡು ಉತಾರೆಗಳು ಆಗಿರುತ್ತವೆ. ಸನ್ 1996 ರಲ್ಲಿ ಎರಡು ಉತಾರೆಗಳು ಆಗಿರುತ್ತವೆ. ಸದರಿ ವಿಷಯ ವಾದಿಗೆ ಮತ್ತು ನಮಗು

ಗೊತ್ತಿರುತ್ತದೆ. 447/1 ವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. 447/1/1 ಒಂದನೇ ಪ್ರತಿವಾದಿಯ ಹೆಸರಿನಲ್ಲಿ 2018 ರವರೆಗೆ ಇರುತ್ತದೆ ಎಂದರೆ ಸರಿ. ಸನ್ 2018 ರವರೆಗೆ ವಾದಿ ಯಾವುದೇ ತಕರಾರು ಮಾಡಿಲ್ಲ ಎಂದರೆ ಸಾಕ್ಷಿಯು 2016 ರಲ್ಲಿ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

6. ವಾದಿಯು ಮತ್ತು ಪ್ರತಿವಾದಿಯ ನಡುವೆ ಯಾವ ಕಾರಣಕ್ಕಾಗಿ ತಕರಾರು ಆಗಿರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿಯು ಖೊಟ್ಟೆ ದಾಖಲಾತಿಗಳನ್ನು ಸೃಷ್ಟಿಸಿದ ಕಾರಣ ಆಗಿರುತ್ತದೆ. ಸನ್ 1997 ರಲ್ಲಿ ನಾನು ಮದುವೆ ಆಗಿ ಬರುವ ಮುಂಚ ಯಾವ ಯಾವ ದಾಖಲಾತಿಗಳು ಆಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ದಾಖಲಾತಿಯನ್ನು ಖೂಟ್ಟಿ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಖೊಟ್ಟೆ ಕಾಗದ ಪತ್ರಗಳನ್ನು ಮಾಡಿಕೊಂಡಿರುತ್ತಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿ.

7. ಸನ್ 1992 ರಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ಆಸ್ತಿಯನ್ನು ಮಂಜೂರು ಮಾಡಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಆಸ್ತಿಯನ್ನು ಯಾವ ದಿನಾಂಕದಂದು ಮಂಜೂರು ಮಾಡಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ. ಸರ್ಕಾರದವರು ನೀಡಿದ ಹಕ್ಕು ಪತ್ರವನ್ನು ನೋಡಿರುತ್ತೇನೆ. ಸದರಿ ಹಕ್ಕಪತ್ರದಲ್ಲಿ ಷರತ್ತುಗಳನ್ನು ನಾನು ನೋಡಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹಕ್ಕು ಪತ್ರವನ್ನು ಯಾರು ನೀಡಿರುತ್ತಾರೆ ಮತ್ತು ಷರತ್ತುಗಳನ್ನು ನಮೂದಿಸಿರುವುದಿಲ್ಲ.

8. ನನಗೆ ಅಳತೆ ಗೊತ್ತಿರುವುದಿಲ್ಲ. ಕಟ್ಟಡ ಕಟ್ಟಲಾಗಿರುತ್ತದೆ ಎಂದು ನುಡಿಯುತ್ತಾರೆ. ಉತ್ತರದಿಂದ ದಕ್ಷಿಣಕ್ಕೆ ಕಟ್ಟಿರುತ್ತಾರೆ. ವಾದಿಯೇ ಕಟ್ಟಡ ಕಟ್ಟಿರುತ್ತಾರೆ. ಸದರಿ ಕಟ್ಟಡದಲ್ಲಿ ಎರಡು ರೂಮಗಳು ಇರುತ್ತವೆ. ವಾದಿಯು ದಾವಾ ಆಸ್ತಿಯಲ್ಲಿ ವಾಸವಾಗಿರುವುದಿಲ್ಲ. ಯಾವಾಗಲಾದರು ಬಂದು ಹೋಗುತ್ತಾರೆ. ದಕ್ಷಿಣ ದಿಕ್ಕಿಗೆ ಬೈಲು ಜಾಗೆ ಇರುತ್ತದೆ. ದಕ್ಷಿಣ ದಕ್ಕಿಗೂ ಬೈಲು ಜಾಗೆ ಇರುತ್ತದೆ. ಪೂರ್ವ ದಿಕ್ಕಿಗೆ ರಸ್ತೆ ಇರುತ್ತದೆ. ಸನ್ 1996 ರಲ್ಲಿ ವಾದಿಯು 1 ನೇ ಪ್ರತಿವಾದಿಗೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಕ್ಕುಬಿಟ್ಟ ಆಧಾರದ ಮೇರೆಗೆ 1 ನೇ ಪ್ರತಿವಾದಿಯ

ಹೆಸರಿನಲ್ಲ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸನ್ 1996 ರಲ್ಲಿ ದಾಖಲಾತಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

9. ನಾನು PUC ರವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸನ್ 1997 ರಿಂದ ದಾಖಲಾತಿಯನ್ನು ನೋಡಿರುವುದಿಲ್ಲ. ವಾದಿಯು ಆಸ್ತಿ ನಂ.447/1/2 ರ ಸನ್ 1996 ರಿಂದ ಇಲ್ಲಿವರೆಗೂ ಕಂದಾಯ ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಆಸ್ತಿ ನಂ.447/1/1 ಗೆ 1ನೇ ಪ್ರತಿವಾದಿಯು ಸನ್ 2018 ರವರೆಗೆ ಕಂದಾಯ ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸನ್ 2018 ರಲ್ಲಿ ಯಾವುದೇ 1ನೇ ಪ್ರತಿವಾದಿಯಿಂದ ಕೈಗಡ ಸಾಲವನ್ನು ಪಡೆದುಕೊಂಡಿರುತ್ತಾರೆ, ಯಾವುದೇ ಆಸ್ತಿಯನ್ನು ಬರೆದುಕೊಟ್ಟಿರುವುದಿಲ್ಲ. ಸನ್ 2018 ರಲ್ಲಿ ವಾದಿಯು ಆಸ್ತಿಯನ್ನು ಮಾರಾಟ ಮಾಡಲು ತಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಯು 60,000/- ರೂಗಳಿಗೆ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**